ರಾಜ್ಯದಲ್ಲಿನ ಅಬಕಾರಿ ಆದಾಯ

400 (2047): ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ):--

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. 1989-90, 1990-91, 1991-92 ಮತ್ತು 1992-93 (ಇದುವರೆಗೆ) ಅಬಕಾರಿ ಇಲಾಖೆಯಿಂದ ಬಂದಿರುವ ಆದಾಯ ಎಷ್ಟು ? (ವರ್ಷವಾರು ಹಾಗೂ ಜಿಲ್ಲಾವಾರು ವಿವರವನ್ನು ಒದಗಿಸುವುದು);

ಆ. ರಾಜ್ಯದಲ್ಲಿ ಅಬಕಾರಿ ಗುತ್ತಿಗೆದಾರರಿಂದ ಸರ್ಕಾರಕ್ಕೆ ಬರಬೇಕಾಗಿರುವ ಒಟ್ಟು ಬಾಕಿ ಹಣವೆಷ್ಟು ? (ಗುತ್ತಿಗೆದಾರರ ಹೆಸರನ್ನು ಒದಗಿಸುವುದು);

ಇ. ಅಬಕಾರಿ ಗುತ್ತಿಗೆದಾರರಿಂದ ಬಾಕಿಯಿರುವ ಹಣವನ್ನು ವಸೂಲಿ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):--

ಅ.

ವರ್ಷ	ರೂ. ಕೋಟಿಗಳಲ್ಲಿ
1989-90	327.57
1990-91	429.47
1991-92	510.52
1992-93	410.34

(ಏಪ್ರಿಲ್ 92 ರಿಂದ ಜನವರಿ 93 ರವರೆಗೆ) ವಿವರಗಳ ಪಟ್ಟಿಯನ್ನು ಅನುಬಂಧ 'ಎ' ಯಲ್ಲಿ ನೀಡಲಾಗಿದೆ.

ಆ. 162.41 ಕೋಟಿ ರೂ.ಗಳು (ಅಕ್ಟೋಬರ್ 92ರಂತೆ) ಜಿಲ್ಲಾವಾರು ವಿವರಗಳನ್ನು ಅನುಬಂಧ 'ಬಿ' ದಲ್ಲಿ ನೀಡಲಾಗಿದೆ.

ಇ. ನ್ಯಾಯಾಲಯಗಳಲ್ಲಿ ತಡೆಯಾಜ್ಞೆಯಿರುವ ಪ್ರಕರಣಗಳಲ್ಲಿ ತಡೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಉಳಿದಿರುವ ಪ್ರಕರಣಗಳಲ್ಲಿ ಕರ್ನಾಟಕ ಭೂಕಾಯಿದೆಯನ್ವಯ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ANNEXURE-A

DISTRICT WISE REVENUE FOR THE YEARS 1989-90 TO 1992-93

Sl. No.	District	1989-90	1990-91	1991-92	1992-93 April 92 to Jan. 93
1.	Bangalore (U)	90.76	131.57	128.10	106.19
2.	Bangalore (R)	13.15	18.10	22.06	18.92
3.	Belgaum	14.77	20.16	25.45	22.09
4.	Bellary	12.57	16.61	24.26	17.84
5.	Bidar	7.94	7.20	10.47	13.49
6.	Bijapur	7.93	10.25	13.16	12.26
7.	Chickmagalur	6.65	11.38	12.79	8.81
8.	Chitradurga	9.98	13.67	18.26	13.61
9.	D.Kannada	37.77	32.07	39.68	32.07
10.	Dharwad	11.54	16.28	22.21	17.61
11.	Gulbarga	16.84	17.15	23.46	17.11
12.	Hassan	9.39	14.22	18.50	13.45
13.	Kodagu	3.88	4.50	6.91	5.01
14.	Kolar	9.67	14.71	20.05	13.45
15.	Mandya	13.87	15.00	19.79	15.05
16.	Mysore	19.21	24.13	33.83	24.52
17.	Raichur	12.16	18.17	22.79	15.67
18.	Shimoga	10.58	19.05	21.71	16.07
19.	Tumkur	14.49	14.91	22.00	16.00
20.	U.Kannada	5.06	8.02	8.22	6.96
	TOTAL	328.21 (327.57)	426.75 (429.47)	513.70 (510.32)	407.15 (subject to reconciliation)

NOTE:- 1. The districtiwise figures furnished is as per the D.C.B. Statements.

2. Figures in bracket against "TOTAL" column denote actual collections.

ANNEXURE-B

Sl. No	Name of the District	Principal	Interest	Other Items	Total
1.	Bangalore (U)	21,82,06,025	1 40,05 413	-	23,22 11,438
2.	Bangalore (R)	7,07,03,417	-	16,50,954	7,23,54,371
3.	Belgaum	2,81,64,560	3 28,00,562	39,14,534	6,48,79,656
4.	Bellary	4,78,31,421	49,55,764	18,28,449	5,46,15,634
5.	Bidar	7,98,937	-	-	7,98,937
6.	Bijapur	1,45,75,363	14,90, 256	37,24,780	1,97,90,399
7.	Chickmagalur	1,23,19,003	19,26,733	21,47,440	1,63,93,176
8.	Chitradurga	3,77,54,146	76,31,010	24 18,545	4,78,03,281
9.	D.Kannada	26,63,80,066	12,09,29,322	72,93,893	39,46 03,281
10.	Dharwar	2,45,98,060	2,79 66 670	21,38,869	5,47,03,599
11.	Gulbarga	3,38,65,697	5 24,02,526	20,21,140	8 82,89,363
12.	Hassan	4,11,69,819	1 88 81,414	22,61,557	6 23,12,790
13.	Kolar	3,59,62,389	1,52,29,477	11,75,044	5,33,49,548
14.	Kodagu	3,41,80,041	1,85,99,437	5,70,070	5,33,49,548
15.	Mandya	7,24,00,768	4,23,46,021	18,95,643	11,66,42,432
16.	Mysore	8,45,35,547	1,20 92,875	70,20,510	10,36,48,932
17.	Raichur	2,81,27,486	2,55,75,831	11,97,545	5,49,00,862
18.	Shimoga	5,43,67,490	1,32,59,734	7,76,895	6,84,04,119
19.	Tumkur	2,11,03,285	1 66,29,443	42,34,772	4,19,67,500
20.	U.Kannada	2,41,20,063	-	-	2,41,20,063
		115,11,63,583	42,67,22,488	4,62,70,640	162,41,56,711

ಶ್ರೀ ಸಾದತ್ ಅಲಿ ಖಾನ್:– ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು 1989-90ರಲ್ಲಿ ಕರ್ನಾಟಕದ ಎಕ್ಸ್ಚೆಸ್ ಇನ್‌ಕಂ 327.57ಕೋಟಿ ಬಂದಿದೆ, 1990-91ರಲ್ಲಿ 429.47 ಕೋಟಿ ರೂಪಾಯಿ ಬಂದಿದೆ, 1991-92ರಲ್ಲಿ 510.52ಕೋಟಿ ರೂಪಾಯಿ ಬಂದಿದೆ,1992-93ರಲ್ಲಿ 410 34 ಕೋಟಿ ಬಂದಿದೆ ಎಂದು ಹೇಳಿದ್ದಾರೆ. ಇದನ್ನು ನೋಡಿದರೆ 1989-90ರಲ್ಲಿ 101.09 ಕೋಟಿ ರೂಪಾಯಿ ಇನ್‌ಕಂ ಜಾಸ್ತಿಯಾಗಿದೆ. ಅದೇ ರೀತಿ 1991-92 ಮತ್ತು 1990-91ಕ್ಕೆ ತೆಗೆದುಕೊಂಡು 81.05 ಕೋಟಿ ರೂಪಾಯಿ ಜಾಸ್ತಿ ಬಂದಿದೆ. ಅದೇ ರೀತಿ 1992-93ಕ್ಕೆ ನೋಡಿದರೆ 100.18 ಕೋಟಿ ಕಡಿಮೆ ಬಂದಿದೆ. Now we are in March. ಈಗ ತಾವು ಬಜೆಟ್‌ನಲ್ಲಿ 1992-93ರಲ್ಲಿ ಏಳುನೂರು ಚಿಲ್ಲರೆ ಕೋಟಿ ರೂಪಾಯಿ ಇನ್‌ಕಂ ಬರುತ್ತದೆ ಎಂದು ಹೇಳಿದ್ದೀರಿ. 1992-93ರಲ್ಲಿ ಇನ್‌ಕಂ ಕಡಿಮೆಯಾಗಿದೆ. ಅದನ್ನು ಜಾಸ್ತಿ ಮಾಡಲು ಹೇಗೆ ಆಗುತ್ತದೆ ?

ಶ್ರೀ ಎಂ. ವೀರಪ್ಪ ಮೊಯಿಲಿ:– ತಾವು 92-93ರಮ್ಲು ಕೇಳಿದ್ದೀರಿ. ಜನವರಿ 92ರವರೆಗೆ 410.34 ಕೋಟಿ ರೂಪಾಯಿಗಳು ಬಂದಿದೆ. ಫೆಬ್ರವರಿ 93ರವರೆಗೆ ಒಟ್ಟು 455.54 ಕೋಟಿ ರೂಪಾಯಿಗಳು ಬಂದಿದೆ. ಪುನಃ 70 ಕೋಟಿ ರೂಪಾಯಿಗಳನ್ನು ನಾವು ನಿರೀಕ್ಷೆ ಮಾಡುತ್ತಿದ್ದೇವೆ. ಅಂದರೆ ಒಟ್ಟು 525 ಕೋಟಿ ರೂಪಾಯಿ ಬರುತ್ತದೆ. ಫೆಬ್ರವರಿ 93ರಲ್ಲಿ ಎಕ್ಸೈಜ್ ಡಿಪಾರ್ಟ್‌ಮೆಂಟ್‌ನವರು 17 ಕೋಟಿ ರೂಪಾಯಿಗಳು ಹೆಚ್ಚು ವಸೂಲಿ ಮಾಡಿದ್ದಾರೆ. ಆದ್ದರಿಂದ ಅರಿಯರ್ಸ್‌ಅನ್ನು ಈಗಾಗಲೇ ಕೊಟ್ಟಿದ್ದಾರೆ. ಎಲ್ಲಾ ಜಿಲ್ಲಾಧಿಕಾರಿಗಳಿಗೂ ರಿಕವರಿಯಾಗಬೇಕೆಂದು ವಿಶೇಷವಾದ ಆದೇಶವನ್ನು ಕೊಟ್ಟು ತಕ್ಷಣ ವಸೂಲಿ ಮಾಡಬೇಕೆಂದು ಹೇಳಿದ್ದೇವೆ. ಸಿವಿಲ್ ಮತ್ತು ಹೈಕೋರ್ಟ್‌ಗಳಲ್ಲಿ ಬಾಕಿ ಬಗ್ಗೆ ಸ್ಟೇ ಆರ್ಡರ್ ಇರುವುದನ್ನು ತೆರವು ಮಾಡುವುದಕ್ಕೆ ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಮತ್ತೆ ಕೆಲವು ಸಿವಿಲ್ ಕೋರ್ಟ್‌ಗಳಲ್ಲಿ ಸ್ಟೇ ಆರ್ಡರ್‌ಗಳನ್ನು ಕೊಡುತ್ತಿದ್ದಾರೆ. ಸುಮಾರು 30 ಕೋಟಿ ರೂಪಾಯಿಗಳವರೆಗೆ ಇದು ಬಂದಿದೆ. ಇದು ಒಂದು ಹೊಸ ಪ್ರವೃತ್ತಿ ಬೆಳೆದುಕೊಂಡು ಬಂದಿದೆ. ಇದರ ವಸೂಲಾತಿಗೆ ವ್ಯಾಪಕವಾದ, ವಿಶೇಷವಾದಂಥ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಾದತ್ ಅಲಿ ಖಾನ್:– ಅಧ್ಯಕ್ಷರೇ, ಎಕ್ಸೈಸ್ ಇನ್‌ಕಮ್, ಇನ್‌ಕ್ರೀಸ್ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಈಗ ಇನ್‌ಕಂ ಟ್ಯಾಕ್ಸ್‌ನಲ್ಲಿ, ಎಕ್ಸೈಸ್ ಹಾಗೂ ಕಸ್ಟಮ್ಸ್‌ನಲ್ಲಿ ಇನ್‌ಫರ್‌ಮೆಂಟ್ಸ್‌ಗೆ 20 ಪರ್‌ಸೆಂಟ್ ಅವಾರ್ಡ್ ಕೊಡುವ ಹಾಗೆ ಇಲ್ಲೂ ಕೊಟ್ಟರೆ ಎಕ್ಸೈಸ್ ಇನ್‌ಕಂ ಕರ್ನಾಟಕದಲ್ಲೂ ಜಾಸ್ತಿಯಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ನಮ್ಮಲ್ಲೂ ಕೂಡ ಇನ್‌ಫರಮೆಂಟ್ಸ್‌ಗೆ ಅವಾರ್ಡ್ ಕೊಡುವುದಕ್ಕೆ ಬಡ್ಜೆಟ್ ಪ್ರಾವಿಷನ್ ಇದೆ.

ಮುಂದೂಡಲಾದ ಪ್ರಶ್ನೆಗಳು

ಮಲೆನಾಡು ಪ್ರದೇಶಾಭಿವೃದ್ಧಿ ಕುರಿತು

290 (1429): ಎ.ಟಿ. ರಾಮಸ್ವಾಮಿ (ಆರಕಲಗೂಡು):–

ಮಾನ್ಯ ಪರಿಸರ ಮತ್ತು ಜೀವ ಪರಿಸರ ಶಾಸ್ತ್ರ ಹಾಗೂ ವಿಜ್ಞಾನ ತಂತ್ರಜ್ಞಾನ ಮತ್ತು ಮಲೆನಾಡು ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮಲೆನಾಡು ಪ್ರದೇಶಾಭಿವೃದ್ಧಿಗಾಗಿ ಮಲೆನಾಡು ಅಭಿವೃದ್ಧಿ ಮಂಡಳಿಯನ್ನು ರಚಿಸಲು ಸರ್ಕಾರವು ತೀರ್ಮಾನಿಸಿದ್ದರು ಸಹ ಇದುವರೆವಿಗೂ ಮಂಡಳಿಯು ರಚನೆಯಾಗದೆ ಅಭಿವೃದ್ಧಿಯ ಕೆಲಸಗಳು ಕುಂಠಿತವಾಗಿರುವುದು ನಿಜವೆ;

ಆ. ಮಲೆನಾಡು ಅಭಿವೃದ್ಧಿ ಮಂಡಳಿಯ ಕೆಲಸ ಕಾರ್ಯಗಳನ್ನು ಸರ್ಕಾರ ಪ್ರಾರಂಭಿಸುವುದು ಯಾವಾಗ ?

ಶ್ರೀ ಎನ್.ಜಿ. ಹಾಲಪ್ಪ (ಪರಿಸರ ಮತ್ತು ಜೀವ ಪರಿಸರ ಶಾಸ್ತ್ರ ಹಾಗೂ ವಿಜ್ಞಾನ ತಂತ್ರಜ್ಞಾನ ಮತ್ತು ಮಲೆನಾಡು ಅಭಿವೃದ್ಧಿ ರಾಜ್ಯ ಸಚಿವರು):–

ಅ ಮತ್ತು ಆ. ಮಲೆನಾಡು ಅಭಿವೃದ್ಧಿ ಮಂಡಳಿಯು ರಚನೆಯಾಗಲಿದೆ. ರಚನೆಯಾದ ಕೂಡಲೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

ಶ್ರೀ ಎ.ಟಿ. ರಾಮಸ್ವಾಮಿ:– ಸನ್ಮಾನ್ಯ ಅಧ್ಯಕ್ಷರೇ, ಅಭಿವೃದ್ಧಿ ಮಂಡಳಿ ರಚನೆಯಾದ ಕೂಡಲೇ